
ಪ್ರಾಂತ್ಯದ, ಕರ್ನಾಟಕದ ಹಾಗೂ ಭಾರತದ ಅಭಿವೃದ್ಧಿಗೆ ಅನಿವಾರ್ಯವಾಗಿತ್ತು ಎನ್ನುವ ಅನೇಕ ವಾದಗಳು, ಸಂಕಥನಗಳು ಕಾದಂಬರಿಯಲ್ಲಿ ಪುನರುಚ್ಚಾರವಾಗುತ್ತವೆ. ಗಮನಿಸಬೇಕಾದ ಅಂಶವೆಂದರೆ, ಅಭಿವೃದ್ಧಿಯ ಈ ಪರಿಕಲ್ಪನೆಯಲ್ಲಿ ನಂಬಿಕೆ ಇಟ್ಟವರು ಕಾದಂಬರಿಯ ಉದಾತ್ತ ಪಾತ್ರಗಳೇ. ಈ ಯೋಜನೆಗಾಗಿ ತನ್ನ ವೃತ್ತಿ ಹಾಗೂ ಸ್ವಂತ ಬದುಕನ್ನೇ ಮುಡಿಪಾಗಿಟ್ಟ ಕೃಷ್ಣರಾವ್, ಈ ಯೋಜನೆಯನ್ನು ಪರಿಕಲ್ಪಿಸಿದ ಅಮೆರಿಕ ಸಂಜಾತ ಫೋರ್ಬ್ಸ್, ನೆರೆ ಪ್ರಾಂತದ ಕಡಾಂಬಿ, ಮೈಸೂರಿನ ದೊರೆ ನಾಲ್ವಡಿಯವರು, ಜನಪರ ದಿವಾನ್‌ರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರು. ಮುಖ್ಯವಾಗಿ 1918ರ ಪೂರ್ವದಲ್ಲಿಯೇ ಈ ಯೋಜನೆಯ ಕಾಣ್ಕೆಯನ್ನು ಕಂಡ ಸರ್ ಎಂ. ವಿಶ್ವೇಶ್ವರಯ್ಯನವರು. ಇವರಾರಿಗೂ ಸ್ವಾರ್ಥವಿಲ್ಲ. ಅಭಿವೃದ್ಧಿಯ ಒಂದು ಮಾದರಿಯಲ್ಲಿ ನಂಬಿಕೆ ಇದೆ. ಆದರೆ, ಈ ಯೋಜನೆಯ ಮಾನವೀಯ ಪರಿಣಾಮಗಳ ಬಗ್ಗೆ ಕಲ್ಪನೆಯಿಲ್ಲ. ಅಂದರೆ, ಆಗುವ ಮುಳುಗಡೆ, ಹಾನಿ, ಇವುಗಳ ಅಂಕಿಸಂಖ್ಯೆಗಳ ಪರಿಚಯವಿದೆಯೇ ಹೊರತು ಅದನ್ನು ಮನುಷ್ಯರ ದುಃಖವನ್ನಾಗಿ ನೋಡುವ ಕಲ್ಪನಾ ಶಕ್ತಿ ಇಲ್ಲ.

ಇದಕ್ಕೆ ವಿರುದ್ಧವಾಗಿ ಕಾದಂಬರಿಯ ಕೇಂದ್ರ ಪ್ರಜ್ಞೆಯಾದ ದತ್ತಪ್ಪ ಹೆಗಡೆಯವರು ಕ್ರಮೇಣವಾಗಿ ಈ ಮಾದರಿಯ ಅಭಿವೃದ್ಧಿ ತರಬಹುದಾದ ಸಾಮಾಜಿಕ ಪ್ರಳಯವನ್ನು ಅರ್ಥ ಮಾಡಿಕೊಳ್ಳುತ್ತಾರೆ. ಅದೆಷ್ಟು ಶತಮಾನಗಳಿಂದಲೋ ಕಡಿಮೆ ಜನಸಂಖ್ಯೆಯ ಜನರು ಹೊರಗಣ ಜಗತ್ತಿನ ಪರಿಚಯವೇ ಇಲ್ಲದೆ ತಮ್ಮ ಸೀಮಿತ ಪರಿಸರದಲ್ಲಿ ಅರ್ಥಪೂರ್ಣವಾಗಿ ಬದುಕಿದ್ದರು. ಅವರೆಲ್ಲ ಕೇವಲ ಮನುಷ್ಯರಾಗಿದ್ದರಿಂದ ಸ್ವಾರ್ಥ, ಈರ್ಷ್ಯೆ, ಲಾಲಸೆ ಇವೆಲ್ಲವೂ ಅವರಲ್ಲಿದ್ದವು. ಆದರೆ, ಸಮುದಾಯದ ಅಲಿಖಿತ ನಂಬಿಕೆಗಳು ಹಾಗೂ ಕಟ್ಟಳೆಗಳಿಂದಾಗಿ ಅವೆಲ್ಲಾ ಕಟ್ಟೆಯೊಡೆಯದಂತೆ ಒಂದು ನಿಯಂತ್ರಣದ ಬದುಕು ಅವರದಾಗಿತ್ತು. ಇದನ್ನು ಬರಹಗಾರರು ವೈಭವೀಕರಿಸುವುದಿಲ್ಲ. ಒಂದು ಕಡೆ ಈ ಸಮುದಾಯದಲ್ಲಿ ಶ್ರೀಮಂತಿಕೆ, ಅಧಿಕಾರವಿದ್ದ ಗಂಡಸರು ಅಸಹಾಯಕ ಹೆಂಗಸರ ಮೇಲೆ ದೌರ್ಜನ್ಯ ಮಾಡುತ್ತಿರಲಿಲ್ಲವೆ, ಸಾಲಕೊಟ್ಟು ಜಮೀನು ತಮ್ಮ ಹೆಸರಿಗೆ ಮಾಡಿಕೊಳ್ಳುತ್ತಿರಲಿಲ್ಲವೇ, ಬಡವರ, ಕೆಳ ಜಾತಿಯವರ ಶೋಷಣೆ ನಡೆಯುತ್ತಿರಲಿಲ್ಲವೇ ಎನ್ನುವ ಪ್ರಶ್ನೆಗಳನ್ನು ಕಾದಂಬರಿಯಲ್ಲಿ ಕೇಳಲಾಗುತ್ತದೆ. ಯೋಜನೆಯೊಂದಿಗೆ ಈ ಕಗ್ಗಾಡಿನಲ್ಲಿ ಶಾಲೆ, ಆಸ್ಪತ್ರೆಗಳು, ರಸ್ತೆ, ಸೇತುವೆಗಳು ಬರಲಿಲ್ಲವೆ ಎನ್ನುವ ಚರ್ಚೆಯೂ ಇಲ್ಲಿದೆ. ಆದರೆ, ಈ ಸವಲತ್ತುಗಳನ್ನು ತಂದಿರುವ ಸರ್ಕಾರ, ಪ್ರಭುತ್ವ ಹಾಗೂ ಅಧಿಕಾರಶಾಹಿಗಳು 'ಕಾಲನಿ' ಮತ್ತು 'ಸ್ಥಳೀಯರು' ಎನ್ನುವ ಅಸಮಾನತೆಯನ್ನು ತರಲಿಲ್ಲವೆ? ಅಮಾನುಷವಾದ ಅಧಿಕಾರಶಾಹಿ ಇಲ್ಲಿಯ ಜನರ ಜೊತೆಗೆ ಹೀನಾಯವಾಗಿ ವರ್ತಿಸಿ ಅವರ ಘನತೆಯನ್ನು ನಾಶಮಾಡಲಿಲ್ಲವೆ? ಹೀಗೆ ಕಾದಂಬರಿಯು ಅತ್ಯಂತ ಪ್ರಭಾವಿಯಾಗಿ ಓದುಗರ ಪ್ರಜ್ಞೆಯನ್ನು ಅರ್ಥಪೂರ್ಣವಾದ ಸಂದಿಗ್ಧದಲ್ಲಿ ಇಡುತ್ತದೆ. ಇದು ಬರಹಗಾರರ ಧೋರಣೆಗಳ ಇಬ್ಬಂದಿತನದಿಂದಲ್ಲ, ಸೃಜನಶೀಲ ಕಥಾಸಾಹಿತ್ಯದ ಸತ್ವವೇ ಆಗಿರುವ ಸಂಕೀರ್ಣವಾದ ಗ್ರಹಿಕೆಯಿಂದ.




**ಪುನರ್ವಸು**
ಲೇ: ಗಜಾನನ ಶರ್ಮಾ
ಬೆ: ₹ 450 ಪ್ರ: ಅಂಕಿತ ಪುಸ್ತಕ, ಬೆಂಗಳೂರು.
ಫೋನ್: 080–2661 7100

ಕೆಲವೊಮ್ಮೆ ಕಾದಂಬರಿಯಲ್ಲಿ ದತ್ತಪ್ಪ ಹೆಗಡೆ ಮತ್ತು ವಸು ಕೃಷ್ಣರಾಯರ ಜೊತೆಗೆ ನಡೆಸುವ ವಾಗ್ವಾದಗಳು ತುಂಬಾ ದೀರ್ಘವಾಗಿವೆ ಹಾಗೂ ಚರ್ಚಾಸ್ಪರ್ಧೆಗಳ ಹಾಗೆ ಕಾಣುತ್ತವೆ. ಆದರೆ, ಚರ್ಚೆಯ ವಸ್ತು ಪ್ರಸ್ತುತವಾಗಿದೆ. ವಿಶೇಷವಾದ ಭಾಗಗಳೆಂದರೆ,